

ಇಲ್ಲಿ ಎಲ್ಲ ವ್ಯರ್ಥ ವಸ್ತುಗಳೂ ಹೂಕುಂಡಗಳೇ

ದೇಶದ ಅಥವಾ ಜಗತ್ತಿನ ಯಾವುದೇ ಪ್ರದೇಶಕ್ಕೆ ಹೋದರೂ ಅಲ್ಲಿಂದ ಹೂವಿನ ಗಿಡಗಳನ್ನು ಹೊತ್ತು ತರುವ ಅಭ್ಯಾಸ ಬೆಳೆಸಿಕೊಂಡಿದ್ದಾರೆ. ಮಿಜೋರಾಂ, ಊಟಿ ಮುಂತಾದ ಕಡೆಗಳಿಂದ ತಂದ ವಿಶಿಷ್ಟ ಗಿಡಗಳು ಇಲ್ಲಿವೆ. ಅಮೆರಿಕದ ತಂದ ನಮ್ಮ ಕ್ಯಾಕ್ಟಸ್ ಅನ್ನು ಹೋಲುವ ಮನಿಪ್ಲಾಂಟ್ ಗಿಡ ಈಗಲೂ ಉಳಿದುಕೊಂಡಿದೆ. 71ರ ಹರೆಯದ ರಾಧಾ ಅವರು ಈಗಲೂ ಬೆಳಿಗ್ಗೆ ಮತ್ತು ಸಂಜೆ ಖುದ್ದಾಗಿ ತಾವೇ ಗಾರ್ಡನ್‌ನ ಪೋಷಣೆಗೆ ಇಳಿಯುತ್ತಾರೆ. 80 ದಾಟಿರುವ ರಂಗಸ್ವಾಮಿ ಅವರಿಗೆ ಸಾಥ್ ನೀಡುತ್ತಾರೆ. ಕಾಂಪೌಂಡ್ ಪಕ್ಕ ಒಂದು ಎತ್ತರದ ಸಂಪಿಗೆ ಮರ ಈಗಲೂ ಹಸಿರಿನಿಂದ ನಳನಳಿಸುತ್ತಿದೆ. 'ಅಯ್ಯೊ ಈ ಮರ ಇನ್ನೂ ದೊಡ್ಡದಾಗಿತ್ತು. ಗೋಣಿ ಚೀಲದಲ್ಲಿ ತುಂಬಿಕೊಂಡು ಹೋಗುವಷ್ಟು ಹೂವು ಬೀಳೋದು. ಆದರೆ ಮರದ ನಾಲ್ಕೈದು ರೆಂಬೆಗಳು ಕಾಂಪೌಂಡ್ ಹೊರಗೆ ಚಾಚಿ ಬೆಳೆದವು. ದಾರಿಯಲ್ಲಿ ಹೋಗುವವರಿಗೆ ಅಪಾಯ ಆಗುತ್ತೆ ಎಂದು ರೆಂಬೆಗಳನ್ನು ಕಡಿದೆವು. ನಾಲ್ಕು ತೆಂಗಿನ ಮರಗಳಿದ್ದವು. ಅವುಗಳ ತೆಂಗಿನ ಕಾಯಿ ಹೊರಗೆ ರಸ್ತೆಯಲ್ಲಿ ಓಡಾಡುವವರ ಮೇಲೆ ಬೀಳಬಾರದು ಎಂದು ಇತ್ತೀಚೆಗೆ ಆ ಮರಗಳನ್ನು ಕಡಿಸಿಹಾಕಿದೆ' ಎಂದು ವ್ಯಥೆಯಿಂದಲೇ ಹೇಳಿದರು ರಾಧಾ.

ಪ್ರತಿ ಮೂರ್ನಾಲ್ಕು ವರ್ಷಗಳಿಗೊಮ್ಮೆ ರಾಧಾ ಅವರು ತಮ್ಮ ಹೂತೋಟದ ಲೇಔಟ್‌ಅನ್ನು ಬದಲಾಯಿಸುತ್ತಾರೆ. ಕೆಲವು ವರ್ಷಗಳ ಕಾಲ ಹತ್ತಾರು ಬಣ್ಣಗಳ ಗುಲಾಬಿ ಗಿಡಗಳೇ ಕಂಗೊಳಿಸಿದ್ದವು. ಇನ್ನು ಕೆಲವು ವರ್ಷ ಕನಕಾಂಬರ, ಜಾಜಿ ಮಲ್ಲಿಗೆ ಗಿಡಗಳ ಮೆರೆದಾಟ. ಎಕ್ಸೋರಾ, ಅಲಮಂಡಾ ಹೂಗಳು ಬೇರೆ. ಬರ್ಡ್ ಆಫ್ ಪ್ಯಾರಡೈಸ್ ಮತ್ತು ವಿವಿಧ ಬಗೆಯ ಆರ್ಕಿಡ್‌ಗಳೂ ಇವರ ತೋಟದಲ್ಲಿ ಕಂಗೊಳಿಸುತ್ತಿವೆ. ಹಸಿರು ಹುಲ್ಲಿನ ಲಾನ್ ಮತ್ತು ಹೂವಿನ ಗಿಡಗಳಲ್ಲಿ ಮೈನಾ, ಟೇಲರ್ ಬರ್ಡ್, ಬಾರ್ಬೆಟ್, ಸನ್ ಬರ್ಡ್ ಎಲ್ಲವೂ ಬಂದು ಗೂಡು ಕಟ್ಟಿಕೊಂಡು ಓಡಾಡುತ್ತಿವೆ.

1996ರಲ್ಲಿ ಬೆಂಗಳೂರು ಅರ್ಬನ್ ಆರ್ಟ್ ಕಮಿಶನ್ ನವರು ಏರ್ಪಡಿಸಿದ ಹೌಸ್ ಗಾರ್ಡನ್ ಸ್ಪರ್ಧೆಯಲ್ಲಿ ರಾಧಾ ಅವರು ಮೊದಲ ಬಾರಿ ಮೊದಲ ಬಹುಮಾನ ಗೆದ್ದರು. ಆಗ ರಾಜ್ಯಪಾಲರಾದ ಖುರ್ಷಿದ್ ಆಲಂ ಖಾನ್ ಅವರು ರಾಜಭವನಕ್ಕೇ ಕರೆಸಿ ನೀಡಿದ ಬಹುಮಾನ ಈಗಲೂ ಇವರ ನೆನಪಿನಲ್ಲಿದೆ. ಆ ಬಳಿಕ ಪ್ರತಿವರ್ಷವೂ ಪ್ರಶಸ್ತಿ ಸಂಭ್ರಮ. 2000ದಲ್ಲಿ ರಾಜ್ಯಪಾಲರಾಗಿದ್ದ ರಮಾದೇವಿ ಅವರಿಂದಲೂ ಪ್ರಶಸ್ತಿ ಪಡೆದಿದ್ದಾರೆ. 2009ರಲ್ಲಿ ಇಂಡಿಯನ್ ಆಯಿಲ್ ಕಂಪೆನಿ ಏರ್ಪಡಿಸಿದ ಬೆಂಗಳೂರು ಹೋಮ್ ಗಾರ್ಡನ್ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, 2016 ಮತ್ತು 17ರಲ್ಲಿ ಲಾಲ್‌ಭಾಗ್ ಹಾರ್ಟಿಕಲ್ಚರ್ ಸೊಸೈಟಿ ಏರ್ಪಡಿಸಿದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ– ಹೀಗೆ ಇವರ ಮನೆಯಲ್ಲಿ ಬಹುಮಾನಗಳ ದೊಡ್ಡ ಭಂಡಾರವೇ ಇದೆ.

ರಾಧಾ ರಂಗಸ್ವಾಮಿಯವರು ತೋಟದಲ್ಲೇ ಸಾವಯವ ಗೊಬ್ಬರ ಮಾಡಿಕೊಳ್ಳುತ್ತಿದ್ದಾರೆ. ಜತೆಗೆ ಮನೆಗೆ ಬೇಕಾದ ತರಕಾರಿಗಳನ್ನೂ ಸ್ವತಃ ಬೆಳೆದುಕೊಳ್ಳುತ್ತಿದ್ದಾರೆ. ಇವರ ಗಾರ್ಡನ್‌ನ ಅಂದ ನೋಡಿ ದಾರಿಹೋಕರು ಎಷ್ಟೋ ಸಲ ವಿನಂತಿ ಮಾಡಿಕೊಂಡು ಒಳಬಂದು ಸೌಂದರ್ಯ ಸವಿಯುವುದಿದೆ. ಪ್ರಶಸ್ತಿಗಳನ್ನು ನೀಡುವಾಗ ಮನೆ ಮತ್ತು ಗಾರ್ಡನ್ ಎರಡರ ಸೌಂದರ್ಯವನ್ನೂ ಗಮನಿಸಿ ನೀಡುತ್ತಾರೆ. ಅದಕ್ಕೆ ತಕ್ಕಂತೆ ಅವರ ಮನೆಯ ಒಳಗೂ ಕೈಗೆ ಸಿಕ್ಕ ವಸ್ತುಗಳಲ್ಲೆಲ್ಲ ಪುಟ್ಟ ಪುಟ್ಟ ಅಲಂಕಾರಿಕ ಗಿಡಗಳು ಕಂಗೊಳಿಸುತ್ತಿವೆ.